ಎಂದು ಉತ್ತರವನ್ನು ಕೊಟ್ಟಿದ್ದೀರಿ, ರೈತನಿಗೆ ಸಹಾಯವಾಗುವಂತಹ ಕೆಲಸವನ್ನು ಮಾಡಿಕೊಡಿ ಎಂದರೆ ಎಕಾನಮಿ ಮೆಜರ್ಸ್ ಎಂದು ಹೇಳುತ್ತೀರಿ, ಈಗ ಕೃಷ್ಣಾ ಮೇಲ್ದಂಡೆಯ ಯೋಜನೆ ಪೂರ್ತಿಗೊಂಡ ನಂತರ ಈ ಬಾಂದಾರದಿಂದ ಪ್ರಯೋಜನ ಹೊಂದುವ ಪ್ರದೇಶಗಳು ಮುಳುಗೆಡೆಯಾಗುತ್ತದೆ ಎಂದು ತಿಳಿದೂ ಈ ಕೆಲಸವನ್ನು ಮಾಡುವುದಕ್ಕೆ ರಾಜಕೀಯ ಪ್ರಭಾವಕ್ಕೆ ಒಳಗಾಗಿ ಏನಾದರೂ ಮಾಡಿದ್ದಾರಾ, ಅಥವಾ ರೈತರ ಹಿತದೃಷ್ಟಿಯಿಂದ ಇದನ್ನು ಮಾಡಿದ್ದೀರಾ ?

†ಶ್ರೀ ಎಸ್.ಬಿ. ನಾಗರಾಳ್.—ಇದನ್ನು ಯಾವುದೇ ರಾಜಕೀಯ ಪ್ರಭಾವಕ್ಕೆ ಒಳಗಾಗಿ ಮಾಡಿಲ್ಲ. ಕೃಷ್ಣಾ ನದಿಯ ನೀರಿನಿಂದ ಕೆಲವು ಜನಗಳಿಗೆ ಸದುಪಯೋಗವಾಗುವ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಈ ಯೋಜನೆಯನ್ನು ತಯಾರು ಮಾಡಿ ಕೆಲಸವನ್ನು ಶುರು ಮಾಡುವಾಗ ಕೃಷ್ಣಾ ಮೇಲ್ದಂಡೆಯ ಯೋಜನೆಯನ್ನು ಕಾರ್ಯಗತ ಮಾಡುತ್ತೇವೆ ಎನ್ನುವ ಅಭಿಪ್ರಾಯ ಸರ್ಕಾರಕ್ಕೆ ಇರಲಿಲ್ಲವೇ ?

ಶ್ರೀ ಎಸ್. ಬಿ. ನಾಗರಾಳ್.—ಹೋದವರ್ಷ ಕೃಷ್ಣಾ ಮೇಲ್ದಂಡೆಯ ಯೋಜನೆಯ ಪ್ರದೇಶದಲ್ಲಿ ಇರತಕ್ಕ ಜನಗಳಿಗೆ ಕುಡಿಯುವ ನೀರೇ ಇರಲಿಲ್ಲ. ಆದ್ದರಿಂದ ಅವರಿಗೆ ಕುಡಿಯುವ ನೀರನ್ನು ಒದಗಿಸಲು ಕೊಯಿನಾ ಪ್ರಾಜೆಕ್ಟಿನಿಂದ ಕೃಷ್ಣಾ ನದಿಗೆ ನೀರನ್ನು ಬಿಡಿಸಿ ಅವರಿಗೆ ಕುಡಿಯುವ ನೀರನ್ನು ಒದಗಿಸಲಾಯಿತು. ಆದ್ದರಿಂದ ಈ ಕೃಷ್ಣಾ ನದಿಯ ಬಾಂಧಾರ ಯೋಜನೆಯನ್ನು ಕೈಗೊಂಡರೆ ಸುಮಾರು 200 ಜನಗಳಿಗೆ ಲಫ್ಟ್ ಇರಿಗೇಷನ್ನಿಗೆ ಉಪಯೋಗವಾಗುತ್ತದೆ ಎನ್ನುವ ದೃಷ್ಟಿಯಿಂದ ಈ ಯೋಜನೆಯನ್ನು ಕೈಗೊಳ್ಳಲಾಯಿತು.

RESERVATION OF 18 PER CENT OF POSTS FOR S.C. / S.T. BY STATE PUBLIC UNDERTAKINGS

207. SRI K. SIDDAIAH (Santhemarahally).—

Will the Minister for Industries and Parliamentary Affairs be pleased to state :—

(*a*) whether Government is aware of the cases of local appointments made by the Public Undertakings (State Government Undertakings) in the State ;

(*b*) if so, the steps taken by the Government to ensure that these undertakings maintain 18 per cent reserve

(SRI K. SIDDAIAH)

of posts in favour of Scheduled Caste/Scheduled Tribe in these local appointments ;

(*c*) if so, whether Government has any proposal to issue suitable instructions to the above undertakings not to appoint local candidates in future?

SRI S. M. KRISHNA:— (Minister for Industries and Parliamentary Affairs).

(*a*) Yes

(*b*) Instructions have been issued to all Government companies to reserve 15 per cent and 3 per cent of the posts to be filled up by direct recruitment in favour of Scheduled Castes and Scheduled Tribes respectively.

(*c*) No, in view of the reply to clause (*b*) above.

ಶ್ರೀ ಕೆ. ಸಿದ್ದಯ್ಯ :—ಸ್ವಾಮಿ ನನ್ನ (ಆ) ಪ್ರಶ್ನೆಗೆ ಉತ್ತರವಾಗಿ ನೇರವಾಗಿ ನೇಮಕಾತಿ ಮಾಡುವಾಗ ಅನಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಯವರಿಗೆ ಅನುಕ್ರಮವಾಗಿ ಶೇಕಡ 15 ಹಾಗೂ 3ರಷ್ಟು ಹುದ್ದೆಗಳನ್ನು ಮೀಸಲಾಗಿಡುವಂತೆ ಎಲ್ಲಾ ಸರ್ಕಾರೀ ಉದ್ಯಮಗಳಿಗೆ ಸೂಚನೆಯನ್ನು ನೀಡಲಾಗಿದೆ ಎಂದು ಹೇಳಿದ್ದೀರಿ, ಹಾಗಾದರೆ ತಾವು ಲೋಕಲ್ ಅಪಾಯಿಂಟ್‌ಮೆಂಟ್‌ಗಳನ್ನು ಮಾಡುವಾಗ ರಿಜರ್ವೇಷನ್ ಕೊಟ್ಟಿದ್ದೀರಾ ?

‡ ಶ್ರೀ ಎಸ್. ಎಂ. ಕೃಷ್ಣ :—ಕೆಲವು ಕಾರ್ಖಾನೆಗಳಲ್ಲಿ ಲೋಕಲ್ ಅಪಾಯಿಂಟ್‌ಮೆಂಟ್ಸ್ ಮಾಡುವಾಗ ಕೂಡ ಎಂಪ್ಲಾಯ್ಮೆಂಟ್ ಎಕ್ಸ್‌ಚೇಂಜಿನಿಂದ ಹೆಸರನ್ನು ತರಿಸಿಕೊಂಡು ರೆಕ್ರೂಟ್ ಮಾಡುತ್ತಿದ್ದೇವೆ. ಭದ್ರಾವತಿಯ ಕಾರ್ಖಾನೆಯಲ್ಲಿ ಸ್ಥಳೀಯ ಅಭ್ಯರ್ಥಿಗಳನ್ನು ತೆಗೆದುಕೊಳ್ಳತಕ್ಕಂಥಾ ಕಾಲದಲ್ಲಿಕೂಡ ಎಂಪಾಯ್‌ಮೆಂಟ್ ಎಕ್ಸ್‌ಚೇಂಜಿನಿಂದ ಅವರ ಹೆಸರುಗಳನ್ನು ತರಿಸಿಕೊಂಡು ರಿಕ್ರೂಟ್ ಮಾಡಿದೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಿಂದ ಹೆಸರುಗಳನ್ನು ತರಿಸಿಕೊಂಡು ರಿಕ್ರೂಟ್ ಮಾಡಬೇಕು ಎಂದು ನ್ಯಾಯಂಡಿಂಗ್ ಇನ್‌ಸ್ಟ್ರಕ್ಷನ್ ಇದೆ. ಪರ್ಮನೆಂಟ್ ವೇಕೆನ್ಸಿಯಾಗಲೀ, ಲೋಕಲ್ ಅಪಾಯಿಂಟ್‌ಮೆಂಟ್ ಆಗಲೀ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ನವರ ಹೆಸರುಗಳನ್ನು ಕಳುಹಿಸುವಾಗ ನಿಮ್ಮ ವರ್ಗದ ಅಭ್ಯರ್ಥಿಗಳ ಹೆಸರುಗಳನ್ನು ಕಳುಹಿಸಬೇಕು ಎಂದು ಇನ್‌ಸ್ಟ್ರಕ್ಷನ್

ಇದೆ. ಮಿಕ್ಕ ಕಾರ್ಖಾನೆಗಳಲ್ಲಿ ಕೂಡ ಈ ಒಂದು ನಿಯಮವನ್ನು ಅನುಸರಿಸ ಬೇಕು ಎಂದು ನೂಚನೆಯನ್ನು ಕೊಡಲಾಗಿದೆ.

ಶ್ರೀ ಕೆ. ಸಿದ್ದಯ್ಯ:- ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲಿ ಲೋಕಲ್ ಅಪಾಯಿಂಟ್‌ಮೆಂಟ್‌ಗಳನ್ನು ಮಾಡುವಾಗ ರಿಜರ್ವೇಷನ್ ಕೊಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ :- ನನ್ನ ವೈಯ್ಯಕ್ತಿಕ ಅಭಿಪ್ರಾಯ ಲೋಕಲ ಅಪಾಯಿಂಟ್‌ಮೆಂಟ್‌ನಲ್ಲಿ ಕೂಡ ರಿಜರ್ವೇಷನ್ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು. ಈ ಬಗ್ಗೆ ನಿರ್ದೇಶನ ಇದುವರೆಗೆ ಹೋಗದಿದ್ದರೆ ಅದನ್ನು ಕೊಡುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ :- ಈಗ ಮಾನ್ಯ ಮಂತ್ರಿಗಳು ಎಂಪ್ಲಾಯಿಮೆಂಟ್ ಎಕ್ಸ್‌ಚೇಜಿನಿಂದ ಹೆಸರುಗಳನ್ನು ತರಿಸಿಕೊಂಡು ಲೋಕಲ್ ಅಪಾಯಿಂಟ್‌ಮೆಂಟ್‌ಗಳನ್ನು ಕೂಡ ಮಾಡುತ್ತೇವೆ ಎಂದು ಹೇಳಿದರು. ಆದರೆ ಎಂಪಾಯ್‌ಮೆಂಟ್ ಎಕ್ಸ್‌ಚೇಂಜಿನಿಂದ ನರಿಯಾಗಿ ವ್ಯವಸ್ಥಿತ ರೀತಿಯಲ್ಲಿ ಕಳುಹಿಸುತ್ತಿಲ್ಲ. ಸೀನಿಯಾರಿಟಿಯನ್ನು ಓವರ್‌ಲುಕ್ ಮಾಡಿ ನಿಮ್ಮ ವರ್ಗದ ಅಭರ್ಥಿಗಳು ಇಲ್ಲ ಎಂದು ಹೇಳುತ್ತಾರೆ. ಆದ್ದರಿಂದ ತಾವು ನಿಗಾವಹಿಸಿ ಹರಿಜನ ಗಿರಿಜನರಿಗೆ 18 ಪರ್ಸೆಂಟ್ ಕೆಲಸಗಳು ಕಾರ್ಖಾನೆಯಲ್ಲಿ ಸಿಕ್ಕುವ ಹಾಗೆ ಆದೇಶ ಕೊಟ್ಟು ಆ ರೀತಿ ವೇಕೇನ್ಸಿ ಫಿಲಪ್ ಮಾಡುವುದಕ್ಕೆ ಆದೇಶ ಕೊಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ :- ಅದು ಸಾಧುವಾದ ಸಲಹೆ.

ಶ್ರೀ ಕೆ. ಸಿದ್ದಯ್ಯ ;- ಲೋಕಲ್ ಅಪಾಯಿಂಟ್‌ಮೆಂಟ್‌ಗಳಿಗೆ ರಿಜರ್ವೇಷನ್ ಕೊಟ್ಟಿಲ್ಲ. ಆದ್ದರಿಂದ ಅದಕ್ಕೆ ಈಗಲಾದರೂ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲಿ ರಿಜರ್ವೇಷನ್ ಕೊಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ :- ಕೊಡಲಾಗುತ್ತದೆ.

CENTRAL LIBRARY IN BANGALORE CANTONMENT AREA

188 SRI K. R. SRINIVASULU NAIDU (Shantinagar).—Will the Minister for Education be pleased to state :—

(*a*) whether there is any proposal to open a Central Library in Bangalore Cantonment area ; if not, the reasons for not opening a library there ,